ಬಳಿಯೇ ನಿಲ್ಲಿಸುತ್ತಿದ್ದ ಖಾಸಗಿ ಬಸ್ಸು ಹತ್ತಿ ಹೋಗುತ್ತಿದ್ದರು. ಹೋಗುವಾಗ ಬರಿ ಕೈಯಲ್ಲಿ ಎಂದೂ ಹೋಗುತ್ತಿರಲಿಲ್ಲ. ಹೊಲದಲ್ಲಿ ಬೆಳೆದ ಅವರೆಕಾಯಿಗಳನ್ನು ಬಿಡಿಸಿ ಕಾಳುಗಳನ್ನೋ, ಹುರುಳಿಕಾಳುಗಳನ್ನೋ, ತೊಗರಿಕಾಳುಗಳನ್ನೋ, ಗದ್ದೆಯಲ್ಲಿ ಬೆಳೆದ ಭತ್ತವನ್ನು ಮಿಲ್ ಮಾಡಿಸಿದ ಅಕ್ಕಿಯನ್ನೋ ಕೊಂಡೊಯ್ಯುತ್ತಿದ್ದರು. ಇಪ್ಪತ್ತೊಂದನೇ ಅಂತಸ್ತಿನಲ್ಲಿದ್ದ ಮಗನ ಫ್ಲ್ಯಾಟಿಗೆ ಲಿಫ್ಟಿನಲ್ಲಿ ಹೋಗುವಾಗ ಎಲ್ಲಿ ಮಧ್ಯದಲ್ಲಿ ನಿಂತುಬಿಡುತ್ತದೋ ಎಂಬ ಹೆದರಿಕೆಯಿಂದ ಅವರ ಕೈಕಾಲುಗಳು ನಡುಗುತ್ತಿದ್ದವು. ಇಬ್ಬರೂ ಮಗನ ಫ್ಲ್ಯಾಟು ತಲುಪಿ ನಿಟ್ಟುಸಿರು ಬಿಟ್ಟಾಗ ಇವರು ತಂದ ಕಾಳು ಕಡ್ಡಿಗಳನ್ನು ನೋಡಿ, "ಇವೆಲ್ಲಾ ಹೊತ್ತುಕೊಂಡು ಬರೋದಾ... ನಿಮಗೆ ಬುದ್ಧಿಯಿಲ್ಲಾ... ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದರೆ ನಮ್ಮೂರಿನ ಮಣ್ಣು ಕೂಡ ಇಲ್ಲಿಗೇ ಬಂದು ಬೀಳುತ್ತದೆ..." ಎಂದು ಚಂದ್ರಕಾಂತ ನಗುತ್ತಿದ್ದ. ಅವನು ಏನು ಹೇಳಿದನೆಂದು ಅರ್ಥವಾಗದೇ ಹೋದರೂ ಪುಟ್ಟಕ್ಕ, "ಬರೀ ಕೈಯಲ್ಲಿ ಬರೋಕಾಯ್ತದಾ ಮಗಾ... ಏನೋ ಒಂದು ತಂದಿದೀವಿ" ಎಂಬ ಸಮಜಾಯಿಶಿ ನೀಡುವುದನ್ನಂತೂ ಮರೆಯುತ್ತಿರಲಿಲ್ಲ. ಮೊಮ್ಮಗಳನ್ನು ಮುಟ್ಟಿ ಅಪ್ಪಿ ಮುದ್ದಾಡಬೇಕು ಎನಿಸಿದರೂ ಮಗ ಸೊಸೆ ಏನಂದುಕೊಂಡಾರೋ ಎಂಬ ಹಿಂಜರಿಕೆಯಿಂದ, 'ಚೆನ್ನಾಗಿದಿಯೇನವ್ವಾ... ಎಷ್ಟನೇ ಕ್ಲಾಸು ಈಗ...' ಎಂದು ಮಾತನಾಡಿಸಿ ಸಂಭ್ರಮಪಡುತ್ತಿದ್ದರು. ಅವರು ಕೇಳಿದ್ದನ್ನು ಮಾತ್ರ ಅರ್ಥ ಮಾಡಿಕೊಂಡು ಕನ್ನಡದಲ್ಲಿ ಉತ್ತರಿಸಲು ತಿಳಿಯದ ಮೊಮ್ಮಗಳು, 'ಐಯಾಮ್ ಫೈನ್... ಫಿಫ್ತ್ ಸ್ಟ್ಯಾಂಡರ್ಡ್...' ಎಂದೇಳಿ ಮುಗುಳ್ನಗುತ್ತಿದ್ದಳು.

ಮಗನೋ ಸೊಸೆಯೋ ಬಡಿಸಿದ ತಿಂಡಿಯನ್ನೋ ಊಟವನ್ನೋ ವಿಶಾಲವಾದ ಡೈನಿಂಗ್ ಟೇಬಲ್ಲಿನ ಬಳಿಯ ಕುರ್ಚಿಯಲ್ಲಿ ಕುಳಿತು ತಿಂದು ಮುಗಿಸಿದರೆ ಮಗನ ಮನೆಯ ಆತಿಥ್ಯ ಕೊನೆಗೊಳ್ಳುತ್ತಿತ್ತು. ನಂತರ ಇಬ್ಬರೂ ಹಾಲಿನಲ್ಲಿದ್ದ ಮೆತ್ತನೆಯ ಸೋಫಾದ ಮೇಲೆ ಕುಳಿತು ಟೀವಿ ನೋಡಬೇಕಿತ್ತು. ಮಾತಿಲ್ಲ, ಕತೆಯಿಲ್ಲ. ಮಗನಾಗಲೀ ಸೊಸೆಯಾಗಲೀ ಅವರ ಕಷ್ಟಸುಖಗಳ ಬಗ್ಗೆ ವಿಚಾರಿಸಿ ನಾಲ್ಕು ಸೌಜನ್ಯದ ಮಾತನಾಡುವ ಗೋಜಿಗೆ ಹೋಗುತ್ತಿರಲಿಲ್ಲ. ಇಬ್ಬರೂ ಅಲ್ಲಿಯೇ ಕುಳಿತು ತಮ್ಮ ತಮ್ಮ ಲ್ಯಾಪ್‌ಟಾಪ್ ಹಿಡಿದು ತಮ್ಮದೇ ಲೋಕದಲ್ಲಿ ಮುಳುಗಿರುತ್ತಿದ್ದರೆ ಮೊಮ್ಮಗಳು ಮೊಬೈಲ್ ಫೋನಿನಲ್ಲಿ ಆಟವಾಡುತ್ತಿರುತ್ತಿದ್ದಳು. ಚಂದ್ರಕಾಂತ ಲ್ಯಾಪ್‌ಟಾಪಿನಿಂದ ತಲೆಯೆತ್ತದೆ, "ಇನ್ನೇನವ್ವಾ ಸಮಾಚಾರ..." ಎಂದು ಶುರು ಮಾಡಿದವನು, "ಏನೂ ಇಲ್ಲಾ ಕಣೋ ಮಗಾ... ನಮ್ಮದು ಏನದೆ... ನೀನೇ ಹೇಳ್ಬೇಕು..." ಎಂದು ಪುಟ್ಟಕ್ಕ ನುಡಿಯುವುದರೊಂದಿಗೆ ಮಾತು ಮುಗಿಯುತ್ತಿತ್ತು. ಹೆಚ್ಚು ಹೊತ್ತು ಸುಮ್ಮನೆ ಕುಳಿತು ಅಭ್ಯಾಸವಿರದ ಪುಟ್ಟಕ್ಕ, "ನಾವು ಬರ್ತೀವಿ ಕಣೋ ಮಗಾ...' ಎಂದು ಮೇಲಕ್ಕೆ ಎದ್ದರೆ, "ಸರಿ ನಡೀರಿ..." ಎಂದು ಹೇಳಿ ಕಾರಿನ ಕೀ ತೆಗೆದುಕೊಂಡು, "ಬಸ್ಸು ಹತ್ತಿಸಿ ಬರ್ತೀನಿ..." ಎಂದು ಹೆಂಡತಿಗೆ ಹೇಳಿ ಅಪ್ಪ ಅವ್ವನೊಂದಿಗೆ ಹೊರನಡೆಯುತ್ತಿದ್ದ. ಮಗಸೊಸೆ, ಮೊಮ್ಮಗಳನ್ನು ಕಣ್ಣಾರೆ ನೋಡಿದ ತೃಪ್ತಿಯಿಂದ ಚನ್ನಪ್ಪ ಪುಟ್ಟಕ್ಕ ಊರಿಗೆ ವಾಪಸಾಗುತ್ತಿದ್ದರು.

ಒಂದು ಭಾವನಾತ್ಮಕ ಆಸರೆಗಾಗಿ ಪರಿತಪಿಸುತಿದ್ದ ಚನ್ನಪ್ಪ ಪುಟ್ಟಕ್ಕ ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳುವ ಅಥವಾ ವಿಶ್ಲೇಷಿಸುವಷ್ಟು ಪ್ರಬುದ್ಧರಾಗಿರಲಿಲ್ಲ ವೆಂಬುದಂತೂ ನಿಜವಾಗಿತ್ತು. ಮಗನ ವೃತ್ತಿಜೀವನದ ಒತ್ತಡಗಳೇನು, ಕೌಟುಂಬಿಕ ಜೀವನದ ಸವಾಲುಗಳೇನು, ನಗರವಾಸಿಗಳ ಸಮಸ್ಯೆಗಳೇನು, ಕೃತಕ ಸಂಬಂಧಗಳನ್ನು ಸೃಷ್ಟಿಸಿಕೊಂಡು, ಅವೇ ಶಾಶ್ವತವೆಂಬ ಭ್ರಮೆಯಲ್ಲಿ ನಿಂತಲ್ಲಿ ಕುಳಿತಲ್ಲಿ ಮನುಷ್ಯನನ್ನು ಸಾಮಾಜಿಕ ಜಾಲತಾಣಗಳಿಗೆ ಅಂಟಿಕೊಳ್ಳುವಂತೆ ಮಾಡಿರುವ ತಂತ್ರಜ್ಞಾನದ ಪಾತ್ರವೇನು ಎಂಬ ಸಂಕೀರ್ಣತೆಗಳು ಅವರಿಗಂತೂ